KAKB720023552022



Presented on : 09-09-2022
Registered on : 09-09-2022
Decided on : 25-06-2026
Duration : 3 years, 9 months, 16 days

**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಸೇಡಂ**

**ಉಪಸ್ಥಿತರುಃ**
**ಶ್ರೀ ಬಾಲು,**
ಬಿ.ಎ., ಎಲ್‌ಎಲ್.ಬಿ.,
ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸೇಡಂ

**ಸಿ.ಸಿ.ನಂ.1533/2022**

**ದಿನಾಂಕಃ 25ನೇ ಜೂನ್ 2026 ರಂದು**

**ಫಿರ್ಯಾದಿದಾರರುಃ**

ಕರ್ನಾಟಕ ರಾಜ್ಯ (ಮಳಖೇಡ ಪೊಲೀಸರಿಂದ)

**(ಸಹಾಯಕ ಸರ್ಕಾರಿ ಅಭಿಯೋಜಕರು)**

**- ವಿರುದ್ದ -**

**ಆರೋಪಿಃ**

1. ಅಮೃತಪ್ಪ ತಂದೆ ಶಿವರಾಯ ಪುಜಾರಿ ,
   ವಃ 60 ವರ್ಷ, ಉಃ ಒಕ್ಕಲುತನ,

2. ವಿಶ್ವರಾಧ್ಯ @ ವಿಶ್ವನಾಥ ತಂದೆ ಅಮೃತಪ್ಪ ಪುಜಾರಿ,
   ವಃ 21 ವರ್ಷ, ಉಃ ಒಕ್ಕಲುತನ,
   ಸಾಃ ಹಂಗನಳ್ಳಿ ಗ್ರಾಮ.

**(ಆರೋಪಿತರು ಶ್ರೀ ಎಸ್. ಆರ್. ಹೆಚ್., ವಕೀಲರು)**

| | | | |
|---|---|---|---|
| 1. | ಪ್ರಕರಣ ನಡೆದ ದಿನಾಂಕ | : | 21.07.2022 |
| 2. | ಪ್ರಕರಣ ದಾಖಲಾದ ದಿನಾಂಕ | : | 21.07.2022 |
| 3. | ಫಿರ್ಯಾದಿದಾರರ ಹೆಸರು | : | ಮಲ್ಲಪ್ಪ ತಂದೆ ಶಿವರಾಯ ಪುಜಾರಿ |

4. ಸಾಕ್ಷಿಗಳ ವಿಚಾರಣೆ ಪ್ರಾರಂಭದ ದಿನಾಂಕ : 30.07.2025

5. ಸಾಕ್ಷಿಗಳ ವಿಚಾರಣೆ ಮುಕ್ತಾಯದ ದಿನಾಂಕ : 10.06.2026

6. ಆಪಾದನೆಗಳು : ಭಾ.ದಂ.ಸಂ.ಕಲಂ.341,323,324, 504 ಮತ್ತು 506 ಸಂಗಡ 34.

7. ನ್ಯಾಯಾಧೀಶರ ತೀರ್ಮಾನ : ಅಂತಿಮ ಆದೇಶದಂತೆ

ಸಹಿ/-
**(ಬಾಲು)**
**ಸಿವಿಲ್ ನ್ಯಾಯಾಧೀಶರು**
**ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸೇಡಂ.**

**<u>ತೀರ್ಪು</u>**

ಠಾಣಾಧಿಕಾರಿಗಳು, ಮಳಖೇಡ ಪೋಲಿಸ ಠಾಣೆ, ಇವರು ಆರೋಪಿತರ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ 341, 323, 324, 504 ಮತ್ತು 506 ಸಂಗಡ 34 ರನ್ವಯ ಅಪರಾಧವನ್ನು ಎಸಗಿರುತ್ತಾರೆಂದು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **<u>ಅಭಿಯೋಜನೆಯ ಮೊಕದ್ದಮ್ಮೆಯ ಸಂಕ್ಷಿಪ್ತ ವಿವರಣೆ:-</u>**

ದಿನಾಂಕ 21.07.2022 ರಂದು ಮುಂಜಾನೆ 10.00 ಗಂಟೆ ಸುಮಾರಿಗೆ ಮಳಖೇಡ ಪೋಲೀಸ ಠಾಣೆಯ ವ್ಯಾಪ್ತಿಯಲ್ಲಿ ಬರುವ ಹಂಗನಳ್ಳಿ ಗ್ರಾಮದಲ್ಲಿ ಚಾಸಾ.1 ರೋಡಿನ ಮೇಲೆ ಜಾಕನಳ್ಳಿ ಇವರ ಮನೆಯ ಹತ್ತಿರ ನಡೆದುಕೊಂಡು ಹೊರಟಾಗ ಆರೋಪಿತರು ತನ್ನ ಹೊಲಕ್ಕೆ ಹೋಗಲು ದಾರಿ ಬಿಡುತ್ತಿಲ್ಲ ಅಂತಾ ವೈಷಮ್ಯ ಬೆಳೆಸಿ ಚಾಸಾ.1 ನೇದ್ದವರಿಗೆ ಮುಂದೆ ಹೋಗದಂತೆ ತಡೆದು, ಮಲ್ಯಾ ನೀನು ನಮ್ಮ ಹೋಲಕ್ಕೆ ಹೋಗಲು ದಾರಿ ಬಿಡುವುದಿಲ್ಲ ಮಗನೇ ಅಂತಾ ಅವಾಚ್ಯ ಶಬ್ದಗಳಿಂದ ಬೈದು,ಆರೋಪಿ.2 ನೇದ್ದವನು ತೆಕ್ಕೆಯಲ್ಲಿ ಹಿಡಿದುಕೊಂಡಿದ್ದು ಆರೋಪಿ.1 ನೇದ್ದವನು ಬಡಿಗೆಯಿಂದ ಬೆನ್ನಿಗೆ ಹೊಡೆದು ಗುಪ್ತಪೆಟ್ಟುಪಡಿಸಿದ್ದು, ಹಾಗೂ ನಂತರ ಆರೋಪಿ.2 ನೇದ್ದವನು ಹೊಟ್ಟೆಯಲ್ಲಿ ಕೈಯಿಂದ ಹೊಡೆದು ಗುಪ್ತ ಪೆಟ್ಟು ಪಡಿಸಿದ್ದು

ನಂತರ ಚಾಸಾ.5, 6 ನೇದ್ದವರು ಜಗಳ ಬಿಡಿಸಿದ್ದು, ಜಗಳ ಬಿಟ್ಟು ಹೋಗುವಾಗ ನೀವು ಇನ್ನೊಂದು ಸಲ ನಮ್ಮ ತಂಟೆಗೆ ಬಂದಲ್ಲಿ ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವದ ಬೆದರಿಕೆ ಹಾಕಿ ಹೋಗಿದ್ದು ಇರುತ್ತದೆಂದು ಪಿರ್ಯಾದಿಯನ್ನು ನೀಡಿರುತ್ತಾರೆ.

3. ಸದರಿ ಫಿರ್ಯಾದಿಯ ಆಧಾರದ ಮೇಲೆ ಮಳಖೇಡ ಪೊಲೀಸರು ತಮ್ಮ ಠಾಣಾ ಗುನ್ನೆ ನಂ.42/2022 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ತನಿಖೆ ಪೂರ್ಣಗೊಂಡ ನಂತರ ಆರೋಪಿತರ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ 341, 323, 324, 504 ಮತ್ತು 506 ಸಂಗಡ 34 ರನ್ವಯ ದಂಡನೀಯ ಅಪರಾಧವನ್ನು ಎಸಗಿರುತ್ತಾರೆಂದು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

4. ದೋಷಾರೋಪಣೆ ಸಲ್ಲಿಸಿದ ನಂತರ ಪ್ರಕರಣದ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿತರ ವಿರುದ್ದ ಸಮನ್ಸ ಜಾರಿ ಮಾಡಿ, ಆರೋಪಿತರ ಹಾಜರಾತಿಯನ್ನು ಪಡೆಯಲಾಯಿತು. ಹಾಗೂ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಪ್ರಕಾರ ದೋಷಾರೋಪಣೆ ಪತ್ರದ ನಕಲು ಪ್ರತಿಯನ್ನು ಆರೋಪಿತರಿಗೆ ನೀಡಿ, ದೋಷಾರೋಪಣೆಯನ್ನು ರಚಿಸುವ ಮುನ್ನ ವಾದ ವಿವಾದವನ್ನು ಆಲಿಸಲಾಯಿತು. ನಂತರ ಭಾರತೀಯ ದಂಡ ಸಂಹಿತೆ ಕಲಂ 341, 323, 324, 504 ಮತ್ತು 506 ಸಂಗಡ 34 ರನ್ವಯ ದೋಷಾರೋಪಣೆಯನ್ನು ರಚಿಸಿ ಆರೋಪಿತರಿಗೆ ಓದಿ ಹೇಳಲಾಗಿ, ಸದರಿ ದೋಷಾರೋಪಣೆಯ ಆರೋಪಗಳನ್ನು ಒಪ್ಪಿಕೊಂಡಿರುವುದಿಲ್ಲ ಮತ್ತು ವಿಚಾರಣೆ ನಡೆಯಬೇಕೆಂದು ಕೇಳಿಕೊಂಡಿರುತ್ತಾರೆ.

5. ಅಭಿಯೋಜನೆಯು ಆರೋಪಿತರ ವಿರುದ್ದ ಅಪಾದನೆಗಳನ್ನು ರುಜುವಾತು ಪಡಿಸುವ ಸಲುವಾಗಿ ಪ್ರಾಸಾ.1 ರಿಂದ 7 ಎಂದು ಸಾಕ್ಷಿ ವಿಚಾರಣೆ ಮಾಡಿದ್ದು ಹಾಗೂ ನಿಪಿ.1 ರಿಂದ 6 ಎಂದು

ದಾಖಲಾತಿಗಳನ್ನು ಮತ್ತು ಮು.ಮಾ..1 ಒಂದು ಜಾಲಿ ಕಟ್ಟಿಗೆ ಗುರುತಿಸಿಕೊಂಡಿರುತ್ತದೆ. ತದನಂತರ ಸರಕಾರಿ ಸಹಾಯಕ ಅಭಿಯೋಜಕರು ಅಭಿಯೋಜನೆಯ ಪರ ಸಾಕ್ಷ್ಯ ವಿಚಾರಣೆಯನ್ನು ಮುಕ್ತಾಯಗೊಳಿಸಲಾಗಿರುತ್ತದೆ.

6. ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿತರ ಹೇಳಿಕೆಯನ್ನು ದಾಖಲಿಸಲಾಗಿದೆ.

7. ಉಭಯ ಪಕ್ಷಗಾರರ ವಾದ ವಿವಾದವನ್ನು ಆಲಿಸಲಾಯಿತು.

8. ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಬಂದಿರುತ್ತವೆ.

**ಅಂಶಗಳು**

1. ದಿನಾಂಕ 21.07.2022 ರಂದು ಮುಂಜಾನೆ 10.00 ಗಂಟೆಯ ಸುಮಾರಿಗೆ ಮಳಖೇಡ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ಹಂಗನಳ್ಳಿ ಗ್ರಾಮದಲ್ಲಿ ಚಾಸಾ.1 ರೋಡಿನ ಮೇಲೆ ಜಾಕನಳ್ಳಿ ಇವರ ಮನೆಯ ಹತ್ತಿರ ನಡೆದುಕೊಂಡು ಹೊರಟಾಗ ಆರೋಪಿ.1 ಮತ್ತು 2 ನೇದ್ದವರು ತನ್ನ ಹೊಲಕ್ಕೆ ಹೋಗಲು ದಾರಿ ಬಿಡುತ್ತಿಲ್ಲ ಅಂತಾ ವೈಷಮ್ಯ ಬೆಳೆಸಿ ಚಾಸಾ.1 ನೇದ್ದವರಿಗೆ ಮುಂದೆ ಹೋಗದಂತೆ ತಡೆದು ನಿಲ್ಲಿಸಿದ್ದು, ಆ ಮೂಲಕ ಭಾ.ದಂ.ಸಂಹೀತೆ ಕಲಂ 341 ಸಂಗಡ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

2. ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರೆಲ್ಲರೂ ಸಮಾನೋದ್ದೇಶದಿಂದ ಕೂಡಿಕೊಂಡು ಬಂದು, ಆರೋಪಿ.2 ನೇದ್ದವನ ಹೊಟ್ಟೆಯಲ್ಲಿ ಕೈಯಿಂದ ಹೊಡೆದು ಗುಪ್ತ ಪೆಟ್ಟುಪಡಿಸಿದ್ದು, ಆ ಮೂಲಕ ಭಾ.ದಂ.ಸಂಹೀತೆ ಕಲಂ 323 ಸಂಗಡ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ

ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

3. ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರೆಲ್ಲರೂ ಸಮಾನೋದ್ದೇಶದಿಂದ ಕೂಡಿಕೊಂಡು ಬಂದು, ಆರೋಪಿ.2 ನೇದ್ದವನು ಚಾಸಾ.1 ರವರಿಗೆ ತೆಕ್ಕೆಯಲ್ಲಿ ಹಿಡಿದುಕೊಂಡಿದ್ದು ಆರೋಪಿ.1 ನೇದ್ದವನು ಬಡಿಗೆಯಿಂದ ಬೆನ್ನಿಗೆ ಹೊಡೆದು ಗುಪ್ತ ಪೆಟ್ಟು ಪಡಿಸಿದ್ದು, ಆ ಮೂಲಕ ಭಾ.ದಂ.ಸಂಹೀತೆ ಕಲಂ 324 ಸಂಗಡ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

4. ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರೆಲ್ಲರೂ ಸಮಾನೋದ್ದೇಶದಿಂದ ಕೂಡಿಕೊಂಡು ಬಂದು, ಅರೋಪಿ.1 ಮತ್ತು 2 ನೇದ್ದವರು ಚಾಸಾ.1 ರವರಿಗೆ ತಡೆದು, ಮಲ್ಯಾ ನೀನು ನಮ್ಮ ಹೊಲಕ್ಕೆ ಹೋಗಲು ದಾರಿ ಬಿಡುವುದಿಲ್ಲ ಮಗನೇ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತತೆಗೆ ಭಂಗ ಉಂಟು ಮಾಡಿದ್ದು, ಆ ಮೂಲಕ ಭಾ.ದಂ.ಸಂಹೀತೆ ಕಲಂ 504 ಸಂಗಡ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

5. ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರು ಸಮಾನೋದ್ದೇಶದಿಂದ ಕೂಡಿಕೊಂಡು ಬಂದು, ಚಾಸಾ.1ರವರೊಡನೆ ಜಗಳ ಮಾಡಿ ಜಗಳ ಬಿಟ್ಟು ಹೋಗುವಾಗ ನೀವು ಇನ್ನೊಂದು ಸಲ ನಮ್ಮ ತಂಟೆಗೆ

ಬಂದಲ್ಲಿ ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವದ ಬೆದರಿಕೆ ಹಾಕಿ ಹೋಗಿದ್ದು, ಆ ಮೂಲಕ ಭಾ.ದಂ.ಸಂಹೀತೆ ಕಲಂ 506 ಸಂಗಡ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

6. ಯಾವ ಆದೇಶ ಅಥವಾ ಶಿಕ್ಷೆ?

9. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಗಿನಂತಿವೆ:

ಅಂಶ ನಂ.1 ರಿಂದ 5: **ನಕರಾತ್ಮಕವಾಗಿ**
ಅಂಶ ನಂ.6 : **ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ**

## ಕಾ ರ ಣ ಗ ಳು

10. **ಅಂಶ ನಂ.1 ರಿಂದ 5:-** ಸದರಿ ಎಲ್ಲಾ ಅಂಶಗಳು ಒಂದಕ್ಕೊಂದು ಅಂತರ್ಗತವಾಗಿರುವುದರಿಂದ, ಚರ್ಚೆಯ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಸದರಿ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

11. ಅಭಿಯೋಜನೆಯು ಆಪಾದಿಸಿರುವಂತೆ ದಿನಾಂಕ 21.07.2022 ರಂದು ಮುಂಜಾನೆ 10.00 ಗಂಟೆ ಸುಮಾರಿಗೆ ಮಳಖೇಡ ಪೋಲೀಸ ಠಾಣೆಯ ವ್ಯಾಪ್ತಿಯಲ್ಲಿ ಬರುವ ಹಂಗನಳ್ಳಿ ಗ್ರಾಮದಲ್ಲಿ ಚಾಸಾ.1 ರೋಡಿನ ಮೇಲೆ ಜಾಕನಳ್ಳಿ ಇವರ ಮನೆಯ ಹತ್ತಿರ ನಡೆದುಕೊಂಡು ಹೊರಟಾಗ ಆರೋಪಿತರು ತನ್ನ ಹೊಲಕ್ಕೆ ಹೋಗಲು ದಾರಿ ಬಿಡುತ್ತಿಲ್ಲ ಅಂತಾ ವೈಷಮ್ಯ ಬೆಳೆಸಿ ಚಾಸಾ.1 ನೇದ್ದವರಿಗೆ ಮುಂದೆ ಹೋಗದಂತೆ ತಡೆದು, ಮಲ್ಯಾ ನೀನು ನಮ್ಮ ಹೋಲಕ್ಕೆ ಹೋಗಲು ದಾರಿ ಬಿಡುವುದಿಲ್ಲ ಮಗನೇ ಅಂತಾ ಅವಾಚ್ಯ ಶಬ್ದಗಳಿಂದ ಬೈದು,ಆರೋಪಿ.2 ನೇದ್ದವನು ತೆಕ್ಕೆಯಲ್ಲಿ ಹಿಡಿದುಕೊಂಡಿದ್ದು ಆರೋಪಿ.1 ನೇದ್ದವನು ಬಡಿಗೆಯಿಂದ ಬೆನ್ನಿಗೆ ಹೊಡೆದು ಗುಪ್ತಪೆಟ್ಟುಪಡಿಸಿದ್ದು, ಹಾಗೂ ನಂತರ ಆರೋಪಿ.2 ನೇದ್ದವನು ಹೊಟ್ಟೆಯಲ್ಲಿ ಕೈಯಿಂದ

ಹೊಡೆದು ಗುಪ್ತ ಪೆಟ್ಟು ಪಡಿಸಿದ್ದು ನಂತರ ಚಾಸಾ.5, 6 ನೇದ್ದವರು ಜಗಳ ಬಿಡಿಸಿದ್ದು, ಜಗಳ ಬಿಟ್ಟು ಹೋಗುವಾಗ ನೀವು ಇನ್ನೊಂದು ಸಲ ನಮ್ಮ ತಂಟೆಗೆ ಬಂದಲ್ಲಿ ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವದ ಬೆದರಿಕೆ ಹಾಕಿ ಹೋಗಿದ್ದು ಇರುತ್ತದೆಂದು ಪಿರ್ಯಾದಿಯನ್ನು ನೀಡಿರುತ್ತಾರೆ.

12. ಸಹಾಯಕ ಸರಕಾರಿ ಅಭಿಯೋಜಕರು ವಿಚಾರ ಮಾಡಿಕೊಂಡ ಸಾಕ್ಷಿಯಲ್ಲಿ ಪ್ರಾಸಾ.1 ಗಾಯಾಳು/ಫಿರ್ಯಾದಿದಾರರು, ಪ್ರಾಸಾ-2 ರಿಂದ 4 ಸಾಕ್ಷಿದಾರರು, ಪ್ರಾಸಾ.5 ತನಿಖಾಧಿಕಾರಿಗಳಾಗಿರುತ್ತಾರೆ, ಪ್ರಾಸಾ.6 ಮತ್ತು 7 ರವರು ಗುನ್ನೆ ಸ್ಥಳದ ಪಂಚರಾಗಿರುತ್ತಾರೆ. ಚಾಸಾ.7 ರವರನ್ನು ವಿಚಾರಣೆಯಿಂದ ಕೈ ಬಿಡಲಾಗಿರುತ್ತದೆ. ಅಭಿಯೋಜನೆಯವರು ಗುರುತಿಸಿಕೊಂಡ ದಾಖಲೆಗಳಲ್ಲಿ ನಿಪಿ.1 ದೂರು, ನಿಪಿ.2 ಮತ್ತು 3 ಸಾಕ್ಷಿ ಹೇಳಿಕೆಯ ಭಾಗ, ನಿಪಿ-4 ಪ್ರಥಮ ವರ್ತಮಾನ ವರದಿ, ನಿಪಿ-5 ಜಪ್ತಿ ಪಂಚನಾಮೆ ಮತ್ತು ನಿಪಿ.6 ಗಾಯದ ಪ್ರಮಾಣ ಪತ್ರವಾಗಿರುತ್ತದೆ.

13. ಪ್ರಾಸಾ-1/ಚಾಸಾ.1 ಮಲ್ಲಪ್ಪ ತಂದೆ ಶಿವರಾಯ ಪೂಜಾರಿ, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ.4 ನನ್ನ ಮಗ. ಚಾಸಾ.5 ಮತ್ತು 6 ರವರು ನಮ್ಮ ಊರಿನವರು. 1 ನೇ ಆರೋಪಿ ನನ್ನ ಅಣ್ಣ. 2 ನೇ ಆರೋಪಿ ನನ್ನ ಅಣ್ಣನ ಮಗ. ಸುಮಾರು 3 ವರ್ಷಗಳ ಹಿಂದೆ ನನ್ನ ಮತ್ತು ಆರೋಪಿತರ ನಡುವೆ ಜಗಳ ಆಗಿತ್ತು. ಹೊಲಗಳಲ್ಲಿ ಎತ್ತು ತಿರುಗಿ ಹೋಗಬಾರದ ಅಂತಾ ಜಗಳ ಆಗಿತ್ತು. ನಾನು ಘಟನೆ ನಡೆದ ದಿನ ನಮ್ಮ ಹೊಲಕ್ಕೆ ಹೋಗುವಾಗ ಆರೋಪಿತನು ನಮ್ಮ ಹೊಲಕ್ಕೆ ಹೋಗಲು ದಾರಿ ಬಿಡುವುದಿಲ್ಲ ಅಂತಾ ಹೇಳಿದ್ದಕ್ಕೆ ನಾನು ಮರಳಿ ಮನೆಗೆ ಬಂದಿದ್ದೆವು. ಸಾಕ್ಷಿಯು ದೂರು ದಾಖಲಾತಿ ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ.1 ಎಂದು ಗುರುತಿಸಲಾಗಿದೆ. ಆದರೇ ನಿಪಿ.1 ರಲ್ಲಿರುವ ವಿಷಯಗಳು ನನಗೆ ಗೊತ್ತಿಲ್ಲ ಎಂದು ಸಾಕ್ಷಿಯು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

14. ಚಾಸಾ.4/ಪ್ರಾಸಾ.2 ಜಗಣ್ಣ ತಂದೆ ಮಲ್ಲಪ್ಪ ಪುಜಾರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ.1 ನನ್ನ ತಂದೆ. ಚಾಸಾ.5 ಮತ್ತು 6 ರವರು ನಮ್ಮ ಊರಿನವರು. 1 ನೇ ಆರೋಪಿ ನನ್ನ ದೊಡ್ಡಪ್ಪ. 2 ನೇ ಆರೋಪಿ ನನ್ನ ದೊಡ್ಡಪ್ಪನ ಮಗ. ದಿ. 21.07.2022 ರಂದು ಬೆಳಿಗ್ಗೆ 10.00 ಸುಮಾರಿಗೆ ಚಾಸಾ.1 ಮತ್ತು ಆರೋಪಿತರ ನಡುವೆ ಜಗಳ ಆಗಿತ್ತು. ನನ್ನ ತಂದೆಯಾದ ಚಾಸಾ.1ರವರು ಜಾಕನಳ್ಳಿರವರ ಮನೆಯ ಹತ್ತಿರ ನಡೆದುಕೊಂಡು ಹೋಗುವಾಗ ಆರೋಪಿತರು ಕೂಡಿಕೊಂಡು ಚಾಸಾ.1 ರವರಿಗೆ ಹೊಡೆದಿರುತ್ತಾರೆ. ನಾನು ಸದರಿ ಜಗಳವನ್ನು ನನ್ನ ಕಣ್ಣಾರೆ ಕಂಡಿಲ್ಲ. ಚಾಸಾ.1 ರವರು ನನಗೆ ಮನೆಗೆ ಬಂದು ತಿಳಿಸಿರುವುದೇನೆಂದರೆ 2 ನೇ ಆರೋಪಿತನು ನನಗೆ ಹಿಡಿದುಕೊಂಡಿದ್ದು ಮತ್ತು 1 ನೇ ಆರೋಪಿತನು ಕಟ್ಟಿಗೆಯಿಂದ ಕಾಲಿಗೆ , ಬೆನ್ನಿಗೆ ಮತ್ತು ಎದೆಗೆ ಹೊಡೆದಿದ್ದಾರೆ ಎಂದು ತಿಳಿಸಿದರು. ಆಗ ಚಾಸಾ.5 ಮತ್ತು 6 ರವರು ಬಂದು ಜಗಳ ಬಿಡಿಸಿರುತ್ತಾರೆ ಎಂದು ತಿಳಿಸಿದರು. ಆಗ ನಾವು ಪೋಲೀಸ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿದೆವು. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆಂದು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ.

15. ಪ್ರಾಸಾ.3 ಮತ್ತು 4 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ.1 ಮತ್ತು 4 ನನಗೆ ಪರಿಚಯ. ಆರೋಪಿತರು ಸಹ ನನಗೆ ಪರಿಚಯ. ಆರೋಪಿತರ ಮತ್ತು ಚಾಸಾ.1 ರವರ ನಡುವೆ ಎಷ್ಟು ವರ್ಷಗಳ ಹಿಂದೆ ಜಗಳ ಆಗಿತ್ತು ನನಗೆ ಗೊತ್ತಿಲ್ಲ. ನಾನು ಆರೋಪಿತರು ಮತ್ತು ಚಾಸಾ.1 ರವರ ನುಡವೆ ಆಗಿದೆ ಎನ್ನಲಾದ ತಂಟೆಯನ್ನು ನಾನು ಕಣ್ಣಾರೆ ಕಂಡಿಲ್ಲ. ಆದರೆ ಜಗಳ ಬಿಡಿಸಿರುತ್ತೇನೆ. ನಾನು ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ಹಾಗೂ ಪ್ರಾಸಾ.4 ರವರು ನಾನು ಯಾವುದೇ ಜಗಳ ಬಿಡಿಸಿಲ್ಲವೆಂದು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ

16. ಚಾಸಾ.8/ಪ್ರಾಸಾ.5 ಮುಜಾಫರ್ ಅಲಿ ತಂದೆ ಸಯ್ಯದ್ ಜಾಫರ್ ಅಲಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ನಾನು ದಿ. 21.07.2022 ರಂದು ಮಧ್ಯಾಹ್ನ 12.30 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ.1 ರವರು ಠಾಣೆಗೆ ಹಾಜರಾಗಿ ಒಂದು ಲಖಿತ ದೂರನ್ನು ಸಲ್ಲಿಸಿದರು. ಸದರಿ ದೂರಿನ ಆಧಾರದ ಮೇಲೆ ನಮ್ಮ ಠಾಣೆಯ ಗುನ್ನೆ ನಂಬರ 42/2022 ನ್ನು ದಾಖಲಿಸಿಕೊಂಡು ಪ್ರ .ವ. ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟೆನು. ಪ್ರ. ವ. ವರದಿಯನ್ನು ನಿಪಿ.4 ಎಂದು ಗುರುತಿಸಲಾಯಿತು. ನಂತರ ಅದೇ ದಿನ ಮಧ್ಯಾಹ್ನ 02.30 ರಿಂದ 03.30 ಗಂಟೆಯವರೆಗೆ ಚಾಸಾ.2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ಪಂಚನಾಮೆಯ ಕಾಲಕ್ಕೆ ಒಂದು ಬಡಿಗೆಯನ್ನು ವಶ ಪಡಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯನ್ನು ನಿಪಿ.5 ಎಂದು ಗುರುತಿಸಲಾಯಿತು. ಸದರಿ ಬಡಿಗೆಯನ್ನು ಮು.ಮಾ..1 ಎಂದು ಗುರುತಿಸಲಾಗಿದೆ. ನಂತರ ಅದೇ ದಿನ ಚಾಸಾ.4 ರಿಂದ 6 ರವರ ಹೇಳಿಕೆಯನ್ನು ದಾಖಲಿಸಿರುತ್ತೇನೆ. ನಂತರ ದಿ.24.07.2022 ರಂದು ಚಾಸಾ.7 ರವರಿಂದ ಚಾಸಾ.1 ರವರ ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರವನ್ನು ನಿಪಿ.6 ಎಂದು ಗುರುತಿಸಲಾಯಿತು. ನಂತರ ಕಡತವನ್ನು ಪರಿಶೀಲಿಸಿ ಸಾಕಷ್ಟು ಸಾಕ್ಷಾಧಾರ ಇರುವುದರಿಂದ ಆರೋಪಿತರ ವಿರುದ್ಧ ಅಂತಿಮದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆಂದು ನುಡಿದಿರುತ್ತಾರೆ.

17. ಪ್ರಾಸಾ.6 ಮತ್ತು 7 ರವರು ಗುನ್ನೆ ಸ್ಥಳದ ಪಂಚರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ.1 ಮತ್ತು 3 ರವರು ನನ್ನ ಗ್ರಾಮದವರು. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನಗೆ ಗೊತ್ತು. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ರೀತಿಯ ಮಾಹಿತಿ ಇರುವುದಿಲ್ಲ. ಪೋಲೀಸರು ನಮ್ಮ ಸಮಕ್ಷಮ ಯಾವುದೇ ರೀತಿಯ ಪಂಚನಾವೆಗಳು ಮಾಡಿರುವುದಿಲ್ಲ. ಸಾಕ್ಷಿಯು ಗುನ್ನೆ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿರುತ್ತಾರೆ. ಆದರೆ ನಿಪಿ.5 ರಲ್ಲಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಪೋಲೀಸರು

ಯಾವುದೇ ವಸ್ತುವನ್ನು ಜಪ್ತಿ ಪಡಿಸಿಕೊಂಡಿಲ್ಲ. ಪೋಲಿಸರ ಕೋರಿಕೆಯ ಮೇರೆಗೆ ನಿಪಿ.5ಕ್ಕೆ ಸಹಿ ಹಾಕಿರುತ್ತೇನೆಂದು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ.

18. ಸದರಿ ಪ್ರಕರಣದಲ್ಲಿ ಪಿರ್ಯಾಧಿದಾರರಾದ ಪ್ರಾಸಾ.1 ರವರು ತನ್ನ ಮುಖ್ಯ ವಿಚಾರಣೆಯಲ್ಲಿ ಮತ್ತು ಘಟನೆ ಬಗ್ಗೆ ಯಾವುದೇ ಸಾಕ್ಷ್ಯ ನುಡಿದಿರುವುದಿಲ್ಲ. ಆದರೇ ಸಹಾಯಕ ಸರಕಾರಿ ಅಭಿಯೋಜಕರು ಮಾಡಿರುವ ಪಾಟೀ ಸವಾಲಿನಲ್ಲಿ ನಿಪಿ.1 ದೂರು ಅನುಗುಣವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಪ್ರಾಸಾ.1 ರವರ ಮುಖ್ಯ ವಿಚಾರಣೆ ಹಾಗೂ ಪಾಟೀಸವಾಲನ್ನು ಕೂಲಂಕುಷವಾಗಿ ಪರೀಶೀಲಿಸಿದಾಗ ಆರೋಪಿ ಮತ್ತು ಪಿರ್ಯಾದಿದಾರರ ನಡುವೆ ಹೊಲಕ್ಕೆ ಹೋಗುವ ದಾರಿ ಬಗ್ಗೆ ತಕರಾರು ಇರುವುದು ಕಂಡುಬರುತ್ತದೆ. ಅಲ್ಲದೇ, ಪ್ರಾಸಾ.2 ಸಾಕ್ಷಿದಾರರಾಗಿದ್ದು ಸದರಿಯವರು ಅಭಿಯೋಜನೆಗೆ ಪೂರಕ ಸಾಕ್ಷ ನುಡಿದಿರುತ್ತಾರೆ. ಆದರೇ ಪ್ರಾಸಾ.2 ರವರು ತನ್ನ ಮುಖ್ಯ ವಿಚಾರಣೆಯಲ್ಲಿ ಜಗಳವನ್ನು ಕಣ್ಣಾರೆ ಕಂಡಿಲ್ಲವೆಂದು ನುಡಿದಿರುತ್ತಾರೆ. ಆದ್ದರಿಂದ ಪ್ರಾಸಾ.2 ರವರ ಸಾಕ್ಷ್ಯಾದಾರದ ಮೇಲೆ ಆರೋಪಿತರು ತಪ್ಪತಸ್ಥರೆಂದು ಹೇಳಲು ಆಗುವುದಿಲ್ಲ.

19. ಪ್ರಾಸಾ.5 ರವರು ಪ್ರಕರಣ ದಾಖಲಿಸಿಕೊಂಡು, ಗುನ್ನೆ ಸ್ಥಳಕ್ಕೆ ಹೋಗಿ ಸ್ಥಳ ಪಂಚನಾಮೆಯನ್ನು ಜರುಗಿಸಿರುವ ಬಗ್ಗೆ ಹಾಗೂ ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡು ಅಂತಿಮ ದೋಷಾರೋಪಣೆಯನ್ನು ಸಲ್ಲಿಸಿರುವ ಬಗ್ಗೆ ಸಾಕ್ಷಿ ನುಡಿದಿದ್ದು. ಸದರಿ ಪ್ರಕರಣದಲ್ಲಿ ಫಿರ್ಯಾದಿದಾರರು ಮತ್ತು ಅವರ ಮಗ ಪ್ರಾಸಾ.2ರವರನ್ನು ಹೊರತು ಪಡಿಸಿ ಬೇರೆ ಯಾರು ಅಭಿಯೋಜನೆಯ ಪ್ರಕರಣಕ್ಕೆ ಬೆಂಬಲಿಸಿರುವುದಿಲ್ಲ. ಆದ್ದರಿಂದ ಅಭಿಯೋಜನೆಯ ಪ್ರಕರಣದಲ್ಲಿ ಯಾವುದೇ ಹುರುಳಿಲ್ಲವೆಂದು ಕಂಡುಬರುತ್ತದೆ.

20. ಯಾವುದೇ ಪ್ರಕರಣದಲ್ಲಿ ಲಭ್ಯವಿರುವ ಸಾಕ್ಷ್ಯಾಧಾರಗಳಿಂದ ಒಂದು ದೃಷ್ಟಿ ಕೋನದಲ್ಲಿ ಆರೋಪಿತನು ತಪ್ಪಿತಸ್ಥರೆಂದು ಕಂಡು ಬಂದಿದ್ದು ಇನ್ನೊಂದು ದೃಷ್ಟಿಕೋನದಲ್ಲಿ ಮುಗ್ದರೆಂದು

ಕಂಡುಬಂದಾಗ, ಆರೋಪಿತನಿಗೆ ಅನುಕೂಲಕರವಾಗುವ ನಿಲುವನ್ನು ನ್ಯಾಯಾಲಯ ತಳೆಯ ಬೇಕಾಗುತ್ತದೆ ಎಂಬುದು ಹಾಗೂ ಪ್ರಕರಣದ ಬಗ್ಗೆ ಸಂಶಯ ಉಂಟಾದಾಗ ಸದರಿ ಸಂಶಯದ ಲಾಭವನ್ನು ಆರೋಪಿತನಿಗೆ ನೀಡಬೇಕೆಂಬುದು ನ್ಯಾಯ ನಿರ್ವಹಣೆಯಲ್ಲಿ ಪಾಲಿಸಿಕೊಂಡು ಬರಲಾದ ತತ್ವವಾಗಿದೆ. ಆದ್ದರಿಂದ ಮೇಲೆ ಚರ್ಚಿಸಿದಂತೆ ಈ ಪ್ರಕರಣದಲ್ಲಿ ಎಲ್ಲಾ ಸಾಕ್ಷಿ ಹಾಗೂ ಇತರ ದಾಖಲೆಗಳನ್ನು ಪರೀಶಿಲಿಸಿದಾಗ ಅಭಿಯೋಜನೆಯು ಆರೋಪಿತರ ವಿರುದ್ದ ಆಪಾದಿಸಲಾದ ಆರೋಪವನ್ನು ಸಂಶಯಾತೀತವಾಗಿ ರುಜುವಾತು ಪಡಿಸಲು ವಿಫಲವಾಗಿದೆ ಹಾಗೂ ಅಭಿಯಾಜನೆಯು ಆರೋಪಿತನ ವಿರುದ್ಧ ಆಪಾದಿಸಲಾದ ಆಪಾದನೆಗಳನ್ನು ಯಾವುದೇ ಬಲವಾದ ಹಾಗೂ ಒಪ್ಪಿ ಕೊಳ್ಳುಬಹುದಾಗ ಸಾಕ್ಷ್ಯಗಳನ್ನು ಹಾಜರುಪಡಿಸಿಲ್ಲ ಹಾಗೂ ಸದರಿ ಆಪಾದನೆಯಗಳನ್ನು ಸಂಶಯಾತತಿವಾಗಿ ರುಜುವಾತು ಪಡಿಸಲು ವಿಫಲವಾಗಿದೆ ಎಂದು ಹೇಳುತ್ತಾ, ಅಂಶ ಸಂಖ್ಯೆ 1ರಿಂದ 5ನ್ನು **ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

21. **ಅಂಶ ನಂ.6:-** ಈ ಮೇಲೆ ಹೇಳಿದ ಅಂಶ ನಂ.1 ರಿಂದ 5ರ ಮೇಲಿನ ಚರ್ಚೆಯಂತೆ ಹಾಗೂ ಕಾರಣಗಳಿಗಾಗಿ ಈ ಕೆಳಗಿನಂತೆ ಅಂತಿಮವಾಗಿ ಆದೇಶಿಸಿರುತ್ತೇನೆ.

**ಆ ದೇ ಶ**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 248 (1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, 1 ಮತ್ತು 2 ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 341, 323, 324, 504 ಮತ್ತು 506 ಸಂಗಡ 34 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಗೆ ನಿರ್ದೋಷಿಯೆಂದು ಬಿಡುಗಡೆ ಗೊಳಿಸಲಾಗಿದೆ.**

**ಆರೋಪಿತರು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟ ಜಾಮೀನು ಭದ್ರತೆಗಳನ್ನು 6 ತಿಂಗಳವರೆಗೆ ವಿಸ್ತರಿಸಲಾಗಿದೆ.**

**ಮು.ಮಾ.1 ಒಂದು ಸರ್ಕಾರಿ ಜಾಲಿ ಕಟ್ಟಿಗೆ ಯಾವುದೇ ಮೌಲ್ಯ ಹೊಂದಿರದ ವಸ್ತು ಆಗಿರುವುದಿಂದ, ಅಪೀಲ ಅವಧಿ ಮುಗಿದ ನಂತರ ನಾಶಪಡಿಸಲು ಈ ಮೂಲಕ ಆದೇಶಿಸಲಾಗಿದೆ.**

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನಕ್ಕೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ್ದು, ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕ 25 ನೇ ಜುನ್ 2026 ರಂದು ತೀರ್ಪನ್ನು ಘೋಷಿಸಲಾಯಿತು)

ಸಹಿ/-
**(ಬಾಲು)**
**ಸಿವಿಲ್ ನ್ಯಾಯಾಧೀಶರು**
**ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸೇಡಂ .**

**ಅನುಬಂಧ**

**ಅಭಿಯೋಜನೆಯ ಪರವಾಗಿ ಮಾಡಿಸಲಾದ ಸಾಕ್ಷ್ಯಗಳು:**

| | | |
|---|---|---|
| ಪಿ.ಡಬ್ಲ್ಯೂ -1 | : | ಮಲ್ಲಪ್ಪ ತಂದೆ ಶಿವರಾಯ ಪೂಜಾರಿ |
| ಪಿ.ಡಬ್ಲ್ಯೂ -2 | : | ಜಗಣ್ಣ ತಂದೆ ಮಲ್ಲಪ್ಪ ಪೂಜಾರಿ |
| ಪಿ.ಡಬ್ಲ್ಯೂ -3 | : | ಬಸವರಾಜು ತಂದೆ ಭೀವಣ್ಣ ಕುಂಬಾರ್ |
| ಪಿ.ಡಬ್ಲ್ಯೂ -4 | : | ಪಾರ್ವತಿ ಗಂಡ ಚಂದಪ್ಪ |
| ಪಿ.ಡಬ್ಲ್ಯೂ -5 | : | ಮುಜಾಫರ್ ಅಲಿ ತಂದೆ ಸಯ್ಯದ್ ಜಾಫರ್ ಅಲಿ |
| ಪಿ.ಡಬ್ಲ್ಯೂ -6 | : | ಗೋಳಪ್ಪ ತಂದೆ ಶಿವರಾಯ |
| ಪಿ.ಡಬ್ಲ್ಯೂ -7 | : | ವಿಶ್ವನಾಥ ತಂದೆ ದೇವಿಂದ್ರಪ್ಪ |

**ಅಭಿಯೋಜನೆಯ ಪರವಾಗಿ ಮಾಡಿಸಲಾದ ಸಾಕ್ಷ್ಯಗಳು:**

| | | |
|---|---|---|
| ನಿ.ಪಿ.1 | : | ದೂರು |
| ನಿಪಿ.1(ಎ) | : | ಪ್ರಾಸಾ.1 ರವರ ಸಹಿ |
| ನಿಪಿ.1(ಬಿ&ಸಿ) | : | ಪ್ರಾಸಾ.5 ರವರ ಸಹಿ |
| ನಿ.ಪಿ.2 | : | ಪ್ರಾಸಾ.3 ರವರ ಹೇಳಿಕೆ ಭಾಗ |
| ನಿ.ಪಿ.3 | : | ಪ್ರಾಸಾ.4 ರವರ ಹೇಳಿಕೆ ಭಾಗ |
| ನಿ.ಪಿ.4 | : | ಪ್ರ ವ ವರದಿ |
| ನಿ.ಪಿ.4(ಎ) | : | ಪ್ರಾಸಾ.5 ರವರ ಸಹಿ |
| ನಿ.ಪಿ.5 | : | ಗುನ್ಹೆ ಸ್ಥಳದ ಪಂಚನಾಮೆ |
| ನಿಪಿ.5(ಎ) | : | ಪ್ರಾಸಾ.5 ರವರ ಸಹಿ |
| ನಿ.ಪಿ.5(ಬಿ) | : | ಪ್ರಾಸಾ.6 ರವರ ಸಹಿ |
| ನಿ.ಪಿ.5(ಸಿ) | : | ಪ್ರಾಸಾ.7 ರವರ ಸಹಿ |
| ನಿ.ಪಿ.6 | : | ಗಾಯದ ಪ್ರಮಾಣ ಪತ್ರ |
| ನಿ.ಪಿ.6(ಎ ) | : | ಪ್ರಾಸಾ.6 ರವರ ಸಹಿ |

**ಅಭಿಯೋಜನೆಯ ಪರ ಗುರುತಿಸಲಾದ ಮುದ್ದೆ ಮಾಲುಗಳ ವಿವರಃ**

ಮು.ಮಾ.1ಃ ಒಂದು ಜಾಲಿ ಕಟ್ಟಿಗೆ

**ಆರೋಪಿತರ ಪರವಾಗಿ ವಿಚಾರಣೆಗೊಳಪಡಿಸಲಾದ ಸಾಕ್ಷಿ ದಾರರ ವಿವರಃ**

- ಇಲ್ಲ -

**ಆರೋಪಿತರ ಪರವಾಗಿ ಗುರುತಿಸಲಾದ ದಾಖಲೆಗಳ ವಿವರಃ**

- ಇಲ್ಲ -

ಸಹಿ/-
**(ಬಾಲು)**
**ಸಿವಿಲ್ ನ್ಯಾಯಾಧೀಶರು**
**ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸೇಡಂ .**

*****

BALU Digitally signed by BALU Date: 2026.06.25 18:47:22 +0530